ಆರ್‌ಬಿಐ/2004/19
ಡಿಸಿಎಂ (ಎನ್‌ಇ) ಸಂಖ್ಯೆ. 310/08.07.18/2003–04

ಜನವರಿ 19, 2004

ಅಧ್ಯಕ್ಷರು, ಭಾರತೀಯ ಸ್ಟೇಟ್ ಬ್ಯಾಂಕು ಮತ್ತು
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳು
ಎಲ್ಲ ಕರೆನ್ಸಿ ಭಂಡಾರ ನಿರ್ವಹಣಾ ಶಾಖೆಗಳು.

ಮಾನ್ಯರೇ,

**ನೋಟುಗಳ/ ನಾಣ್ಯಗಳ ವಿನಿಮಯಕ್ಕೆ ಸಾರ್ವಜನಿಕರಿಗೆ ಸೌಲಭ್ಯಗಳನ್ನು ಒದಗಿಸುವುದು, ಇತ್ಯಾದಿ.**

ನಿಮಗೆ ತಿಳಿದಿರುವಂತೆ ಭಾರತೀಯ ರಿಸರ್ವ್ ಬ್ಯಾಂಕು ಕರೆನ್ಸಿ ಮತ್ತು ನಾಣ್ಯಗಳ ವಿತರಣೆ ಮತ್ತು ವಿನಿಮಯದಂಥ ಸಣ್ಣಪುಟ್ಟ ಸೇವೆಗಳನ್ನು ಸಾರ್ವಜನಿಕರಿಗೆ ನೀಡುತ್ತಿದೆ. ನಮ್ಮ ಪ್ರಾದೇಶಿಕ ಕಚೇರಿಗಳು ಎಲ್ಲ ವರ್ಗಗಳ ಹೊಸ ಒಳ್ಳೆಯ ನೋಟುಗಳನ್ನು ಮತ್ತು ನಾಣ್ಯಗಳನ್ನು ನೀಡುತ್ತಿವೆ. ಕೊಳೆಯಾದ ನೋಟುಗಳ ವಿನಿಮಯ ಮಾಡಿಕೊಡುತ್ತಿವೆ. ನಿರುಪಯುಕ್ತ ನೋಟುಗಳ ಬಗ್ಗೆ ಕಾನೂನು ಪ್ರಕಾರ ತೀರ್ಮಾನ ತೆಗೆದುಕೊಳ್ಳುತ್ತಿವೆ ಹಾಗೂ ವ್ಯವಹಾರಗಳಿಗಾಗಿ ಅಥವಾ ವಿನಿಮಯ ರೂಪದಲ್ಲಿ ನೋಟುಗಳನ್ನು ಮತ್ತು ನಾಣ್ಯಗಳನ್ನು ಅಂಗೀಕರಿಸುತ್ತಿವೆ. ಈ ಸೇವೆಗಳನ್ನು ವಿಸ್ತರಿಸುವ ದೃಷ್ಟಿಯಿಂದ ಅಧಿಕ ಸಂಖ್ಯೆಯ ಕರೆನ್ಸಿ ಭಂಡಾರಗಳನ್ನು ಮತ್ತು ಸಣ್ಣ ನಾಣ್ಯ ಡಿಪೋಗಳನ್ನು ತೆರೆಯಲು ಸಾರ್ವಜನಿಕ ವಲಯ ಬ್ಯಾಂಕುಗಳಿಗೆ, ಖಾಸಗಿ ವಲಯ ಬ್ಯಾಂಕುಗಳಿಗೆ ಹಾಗೂ ಕೆಲವು ವಿದೇಶೀ ಬ್ಯಾಂಕುಗಳಿಗೆ ನಾವು ಅನುಮತಿ ನೀಡಿದ್ದೇವೆ. ಆರ್‌ಬಿಐ (ನೋಟು ಮರು ಪಾವತಿ) ನಿಯಮಗಳ ಅಡಿಯಲ್ಲಿ ನಿರುಪಯುಕ್ತ ನೋಟುಗಳ ಬಗ್ಗೆ ಕಾನೂನು ಪ್ರಕಾರ ತೀರ್ಮಾನ ತೆಗೆದುಕೊಳ್ಳಲು ಸಾರ್ವಜನಿಕ ವಲಯ ಬ್ಯಾಂಕುಗಳಿಗೆ ಮತ್ತು ಇತರ ಬ್ಯಾಂಕುಗಳ ಕರೆನ್ಸಿ ಭಂಡಾರ ಹೊಂದಿರುವ ಶಾಖೆಗಳಿಗೆ ಪೂರ್ಣ ಅಧಿಕಾರವನ್ನು ಸಹ ನಾವು ನೀಡಿದ್ದೇವೆ.

2. ಹೊಸ ನೋಟುಗಳು ಮತ್ತು ನಾಣ್ಯಗಳು ಕರೆನ್ಸಿ ಭಂಡಾರಗಳಿಗೆ ಮತ್ತು ಅವುಗಳ ಮೂಲಕ ಭಂಡಾರ ರಹಿತ ಬ್ಯಾಂಕು ಶಾಖೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಮಾಡಲು ನಾವು ಇತ್ತೀಚೆಗೆ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಲ್ಲದೆ. ಕರೆನ್ಸಿ ಭಂಡಾರಗಳಲ್ಲಿ ಕೊಳೆಯಾದ ನೋಟುಗಳು ರಾಶಿ ಬೀಳುವುದನ್ನು ತಪ್ಪಿಸಿದ್ದೇವೆ ಮಾತ್ರವಲ್ಲದೆ ಕರೆನ್ಸಿ ಭಂಡಾರಗಳಿಂದ ಕೊಳೆಯಾದ ನೋಟುಗಳನ್ನು ನಿರಂತರವಾಗಿ ತೆಗೆದುಹಾಕಲು ಮತ್ತು ಸುಧಾರಿತ ಭದ್ರತಾ ನಿಗಾ ವ್ಯವಸ್ಥೆಯಲ್ಲಿ ಕರೆನ್ಸಿ ಪರಿಶೀಲನೆ ಹಾಗೂ ಸಂಸ್ಕರಣಾ ವ್ಯವಸ್ಥೆಗಳ ಮೂಲಕ ಅವುಗಳನ್ನು ಕೂಡಲೇ ವಿಲೇವಾರಿ ಮಾಡಲು ಅನುಕೂಲವಾಗಿಸುವ ಸೌಲಭ್ಯಗಳನ್ನು ಸಹಾ ಸಾಕಷ್ಟು ಪ್ರಮಾಣದಲ್ಲಿ ಸೃಜಿಸಿದ್ದೇವೆ.

3. (ಎ) ಎಲ್ಲ ವರ್ಗಗಳ ಹೊಸ ಮತ್ತು ಉತ್ತಮ ಗುಣಮಟ್ಟದ ನೋಟುಗಳಿಗೆ ಮತ್ತು ನಾಣ್ಯಗಳಿಗೆ ಸಾರ್ವಜನಿಕರಿಂದ ಇರುವ ಬೇಡಿಕೆಯನ್ನು ಪೂರೈಸುವ (ಬಿ) ಕೊಳೆಯಾದ ನೋಟುಗಳನ್ನು ಬದಲಾಯಿಸಿಕೊಡುವ (ಸಿ) ಅನುಪಯುಕ್ತ ನೋಟುಗಳ ಬಗ್ಗೆ ಕಾನೂನು ಪ್ರಕಾರ ತೀರ್ಮಾನ ಕೈಗೊಳ್ಳುವ ಮತ್ತು (ಡಿ) ವ್ಯವಹಾರಗಳಿಗಾಗಿ ಅಥವಾ ವಿನಿಯಮದಲ್ಲಿ ನೋಟುಗಳನ್ನು ಮತ್ತು ನಾಣ್ಯಗಳನ್ನು ಅಂಗೀಕರಿಸುವ ಸಂಬಂಧದಲ್ಲಿ ಗ್ರಾಹಕ ಸೇವೆಗಳಿಗೆ ಸ್ಥೂಲ ಆಧಾರ ಕಲ್ಪಿಸಲು ಸಮಗ್ರ ನೀತಿಯ ವಿಷಯವಾಗಿ ದೇಶದ ಎಲ್ಲ ಭಾಗಗಳಲ್ಲಿರುವ ಕರೆನ್ಸಿ ಭಂಡಾರ ನಿರ್ವಹಿಸುತ್ತಿರುವ ಬ್ಯಾಂಕುಗಳ ಎಲ್ಲ ಶಾಖೆಗಳು ಸಾರ್ವಜನಿಕರಿಗೆ ಈ ಸೇವೆಗಳನ್ನು ಹೆಚ್ಚು ಸಕ್ರಿಯವಾಗಿ ಮತ್ತು ಉತ್ಸಾಹದಿಂದ ಒದಗಿಸಬೇಕೆಂದು ನಿರ್ಧರಿಸಲಾಗಿದೆ. ಹಾಗೆ ಮಾಡುವುದರಿಂದ ಅವರು ಈ ಉದ್ದೇಶಕ್ಕಾಗಿ ಆರ್‌ಬಿಐನ ಪ್ರಾದೇಶಿಕ ಕಚೇರಿಗಳನ್ನು ಸಂಪರ್ಕಿಸುವ ಅಗತ್ಯ ಬರುವುದಿಲ್ಲ. ನಿಮ್ಮ ಶಾಖೆಗಳಲ್ಲಿ ಅಂಥ ಸೌಲಭ್ಯ ದೊರೆಯುವುದನ್ನು ಜನ ಸಾಮಾನ್ಯರ ಮಾಹಿತಿಗಾಗಿ ಪ್ರಕಟಪಡಿಸುವಂತೆ ನಿಮ್ಮನ್ನು ಕೋರುತ್ತೇವೆ.

4. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ನಂಬುಗೆಯ
(ಪಿ.ಕೆ ಬಿಸ್ವಾಸ್)